ಸಿ.ಸಿ.253/2023 ಪಿಡಬ್ಲ್ಯೂ-1

ದಿನಾಂಕಃ 16.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ.ವಿ. ವಕೀಲರಿಂದಃ**

ನಮ್ಮ ತಂದೆಗೆ 4 ಜನ ಮಕ್ಕಳು, ಮೊದಲನೆಯವರು ನಾವು, 2ನೆಯವರು ಲಕ್ಷ್ಮಣಗೌಡ, 3ನೆಯವರು ಭಾಸ್ಕರ, 4 ನೆಯವರು ವೆಂಕಟೇಶ್. ನಮ್ಮಗಳ ನಡುವೆ ವಿಭಾಗವಾಗಿದೆ. ಸದರಿ ವಿಭಾಗದ ದಿನಾಂಕ ನೆನಪಿರುವುದಿಲ್ಲ. ನನ್ನ ಹೆಸರಿನಲ್ಲಿ ಜಮೀನು ಇದೆ ಎಂದು ತೋರಿಸಲು ಕೆಲವು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಹಲವು ವರ್ಷಗಳಿಂದ ಆರೋಪಿಯ ಪರಿಚಯವಿರುತ್ತದೆ. ಪ್ರಸ್ತುತ ಪ್ರಕರಣಕ್ಕೂ ಪೂರ್ವದಲ್ಲಿ ಆರೋಪಿಯ ಮೇಲೆ ಒಂದು ಪ್ರಕರಣ ದಾಖಲು ಮಾಡಲಾಗಿತ್ತು ಎಂದರೆ ಸರಿ. ಪ್ರಸ್ತು ಪ್ರಕರಣದ ಚೆಕ್ಕನ್ನು ನಿಪಿ-7 ರ ಪ್ರಕ್ರರಣದಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಿಪಿ-1 ನ್ನು ಯಾವ ಇಸವಿಯಂದು ಪಡೆದುಕೊಂಡಿರುತ್ತೇನೆ ಎಂದು ನೆನಪಿಲ್ಲ. ನಾನು ಆರೋಪಿಯಿಂದ ಪಡೆದಂತಹ ಮೊದಲನೇ ಚೆಕ್ ಅಮಾನ್ಯಗೊಂಡ ಕುರಿತು ಒಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಸದರಿ ಪ್ರಕರಣವನ್ನು ರಾಜಿ ಮಾಡಿಕೊಂಡು ಸದರಿ ಸಮಯದಲ್ಲಿ ಆರೋಪಿಯು 2ನೇ ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ನಿಪಿ-7 ರಲ್ಲಿ ತಿಳಿಸಿದಂತೆ ಎ.ಕೆ.ಹೆಚ್ ಟ್ರೇಡರ್ ಎಂಬ ಹೆಸರಿನಲ್ಲಿ ವ್ಯವಹರಿಸುತ್ತಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಗಳು ನ್ಯಾಯಾಲಯದ ಮುಂದೆ ಕಂಡುಬಾರದಿದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ.

ನನಗೆ ಓದಲು ಬರೆಯಲು ಬರುತ್ತದೆ. ನಾನು ಆರೋಪಿಯೊಂದಿಗೆ ಯಾವುದೇ ರೀತಿ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರ ಪ್ರಕರಣದಲ್ಲಿ ಪಡೆದುಕೊಂಡಂತಹ ಚೆಕ್ಕನ್ನು 2022 ರ ಸಾಲಿನ ಡಿಸೆಂಬರ್ ತಿಂಗಳಿನಲ್ಲಿ ಪಡೆದಿರುತ್ತೇನೆ. ಪ್ರಸ್ತುತ ಪ್ರಕರಣದ ಚೆಕ್ಕನ್ನು 2022 ಡಿಸೆಂಬರ್ 22 ರಂದು ಪಡೆದುಕೊಂಡಿರುತ್ತೇನೆ. ನಿಪಿ-7 ರ ಪ್ರಕರಣವೂ ದಾಖಲು ಮಾಡುವ ಪೂರ್ವದಲ್ಲಿ ಆರೋಪಿಯಿಂದ ಬಲವಂತವಾಗಿ ಚೆಕ್ಕನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ರಾಜಿಯಾದ ಸಮಯದಲ್ಲಿಆರೋಪಿಯು ಸಂಪೂರ್ಣ ಹಣವನ್ನು ಪಾವತಿ ಮಾಡಿದ್ದರೂ ಸಹಾ ನಿಮ್ಮ ಬಳಿ ಇದ್ದಂತಹ ಆರೊಪಿಗೆ ಸಂಬಂದಪಟ್ಟ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-6 ರ ಪ್ರಕಾರ ಆರೋಪಿಯು ಸಂಪೂರ್ಣ ಹಣ ಪಾವತಿಸಿದ್ದು ಉಳಿದ ಯಾವುದೇ ಮೊತ್ತವನ್ನು ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾವು ಅಣ್ಣ ತಮ್ಮಂದಿರು ಒಟ್ಟಿಗೆ ಆರೋಪಿಯೊಂದಿಗೆ ವ್ಯವಹರಿಸಿರುವುದಿಲ್ಲ. ಸುಮಾರು 10-15 ವರ್ಷದಿಂದ ಆರೋಪಿಯೊಂದಿಗೆ ವ್ಯವಹರಿಸುತ್ತಿರುತ್ತೇನೆ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಮಧ್ಯೆ ವಿಭಾಗವಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.